KAHS610016522023

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಚನ್ನರಾಯಪಟ್ಟಣ**

**ಉಪಸ್ಥಿತರು : ಶ್ರೀಮತಿ ಕುಸುಮ.** ಬಿ.ಎ.ಎಲ್., ಎಲ್ ಎಲ್.ಬಿ.
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಚನ್ನರಾಯಪಟ್ಟಣ.

**ದಾವಾ ಸಂಖ್ಯೆ 489/2023**

**ದಿನಾಂಕ : 17 ನೇ ಮಾರ್ಚ್ 2026**

**ವಾದಿಯರು** : 1. ಶ್ರೀಮತಿ ಸುಬ್ಬಮ್ಮ,
ಬಿನ್ ಮುದ್ದಲಿಂಗೇಗೌಡ,
ಕೋಂ ನಂಜುಂಡೇಗೌಡ,
ವಯಸ್ಸು ಸಮಾರು 68 ವರ್ಷ,
ಮತಿಘಟ್ಟ ಗ್ರಾಮ, ಹಿರಿಸಾವೆ ಹೋಬಳಿ,
ಚನ್ನರಾಯಪಟ್ಟಣ ತಾಲ್ಲೂಕು.

2. ಶ್ರೀಮತಿ ಯಶೋಧಮ್ಮ,
ಬಿನ್ ಮುದ್ದಲಿಂಗೇಗೌಡ,
ಕೋಂ ದೊಡ್ಡೇಗೌಡ,
ವಯಸ್ಸು ಸಮಾರು 64 ವರ್ಷ,
ಅರಕೆರೆ ಗ್ರಾಮ, ಹಿರಿಸಾವೆ ಹೋಬಳಿ,
ಚನ್ನರಾಯಪಟ್ಟಣ ತಾಲ್ಲೂಕು.

**3.** ಶ್ರೀಮತಿ ಮಂಜುಳಮ್ಮ,
ಬಿನ್ ಮುದ್ದಲಿಂಗೇಗೌಡ,
ಕೋಂ ರಾಜೇಗೌಡ,
ವಯಸ್ಸು ಸಮಾರು 62 ವರ್ಷ,
ನುಗ್ಗೇಹಳ್ಳಿ ಗ್ರಾಮ, ನುಗ್ಗೇಹಳ್ಳಿ ಹೋಬಳಿ,
ಚನ್ನರಾಯಪಟ್ಟಣ ತಾಲ್ಲೂಕು.

**(ಪ್ರತಿನಿಧಿಸುವವರು : ಶ್ರೀ. ಹೆಚ್.ಎನ್.ಆರ್ ವಕೀಲರು)**

**ವಿರುದ್ಧ**

**ಪ್ರತಿವಾದಿಯರು** : 1. ಶ್ರೀ. ನಂಜೇಗೌಡ,
ಬಿನ್ ಮುದ್ದಲಿಂಗೇಗೌಡ,
ವಯಸ್ಸು ಸಮಾರು 70 ವರ್ಷ,
ಅರಕೆರೆ ಗ್ರಾಮ, ಹಿರಿಸಾವೆ ಹೋಬಳಿ,
ಚನ್ನರಾಯಪಟ್ಟಣ ತಾಲ್ಲೂಕು.

2. ಶ್ರೀ ಮುದ್ದೇಗೌಡ,
ಬಿನ್ ಮುದ್ದಲಿಂಗೇಗೌಡ,
ವಯಸ್ಸು ಸಮಾರು 66 ವರ್ಷ,
ಮತಿಘಟ್ಟ ಗ್ರಾಮ, ಹಿರಿಸಾವೆ ಹೋಬಳಿ,
ಚನ್ನರಾಯಪಟ್ಟಣ ತಾಲ್ಲೂಕು.

**(ಪ್ರತಿವಾದಿಯರು ಏಕಪಕ್ಷಿಯವಾಗಿರುತ್ತಾರೆ)**

| | | |
|---|---|---|
| 1. ದಾವಾ ಹೂಡಿದ ದಿನಾಂಕ | ಃ | 19.06.2023 |
| 2. ದಾವಾ ಸ್ವರೂಪ | ಃ | ಭಾಗಾಂಶಕ್ಕಾಗಿ |
| 3. ಸಾಕ್ಷಿ ವಿಚಾರಣೆ ಪ್ರಾರಂಭವಾದ ದಿನಾಂಕ | ಃ | 23.04.2024 |
| 5. ತೀರ್ಪನ್ನು ಪ್ರಕಟಿಸಿದ ದಿನಾಂಕ | ಃ | 17.03.2026 |

| | | | | |
|---|---|---|---|---|
| 6. ಒಟ್ಟು ಅವಧಿ | ಃ | ವರ್ಷ | ತಿಂಗಳು | ದಿನ |
| | | 02 | 08 | 26 |

**(ಶ್ರೀಮತಿ ಕುಸುಮ ವಿ)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂ., ಚನ್ನರಾಯಪಟ್ಟಣ**

## ಃಃ ತೀರ್ಪು ಃಃ

ದಾವಾ ಷಡ್ಯೂಲ್ ಸ್ವತ್ತಿನಲ್ಲಿ ವಾದಿಯರಿಗೆ ಕಾನೂನು ಬದ್ಧವಾಗಿ ಐದನೇ ಒಂದು ಭಾಗದ ಹಿಸ್ಸೆಯನ್ನು ವಿಭಜಿಸಬೇಕಾಗಿ ಹಾಗೂ ಇತರೆ ತಾಜಾ ಪರಿಹಾರಗಳನ್ನು ಕೋರಿ ಈ ದಾವೆಯನ್ನು ಸಲ್ಲಿಸಿರುತ್ತಾರೆ.

**2. ವಾದಪತ್ರದ ಸಂಕ್ಷೇಪ್ತ ವಿವರಣೆ :**

1 ರಿಂದ 3 ನೇ ವಾದಿಯರು ಮತ್ತು 1 ಮತ್ತು 2 ನೇ ಪ್ರತಿವಾದಿಯರು ಸಹೋದರ ಸಹೋದರಿಯರಾಗಿರುತ್ತಾರೆ. ವಾದಿ ಮತ್ತು ಪ್ರತಿವಾದಿಯರು ಮುದ್ದಲಿಂಗೇಗೌಡ ಮತ್ತು ಪುಟ್ಟಮ್ಮನವರ ಮಕ್ಕಳಾಗಿರುತ್ತಾರೆ. ದಾವಾ ಷಡ್ಯೂಲ್ ಸ್ವತ್ತುಗಳು ವಾದಿ ಮತ್ತು ಪ್ರತಿವಾದಿಯರ ತಂದೆ ಮುದ್ದಲಿಂಗೇಗೌಡರ ಪಿತ್ರಾರ್ಜಿತ ಸ್ವತ್ತುಗಳಾಗಿದ್ದು, ಹಿಂದೂ ಅವಿಭಕ್ತ ಕುಟುಂಬದ ವಾದಿ ಮತ್ತು ಪ್ರತಿವಾದಿಯರ ಪಿತ್ರಾರ್ಜಿತ ಸ್ವತ್ತುಗಳಾಗಿರುತ್ತದೆ. ಈವರೆವಿಗೂ ವಾದಿ ಮತ್ತು ಪ್ರತಿವಾದಿಯರ ನಡುವೆ ಒಟ್ಟು ಕುಟುಂಬದಲ್ಲಿ ಯಾವುದೇ ಹಿಸ್ಸಾ ನಡವಳಿಕೆಗಳು ನಡೆದಿರುವುದಿಲ್ಲ. ದಾವಾ ಷಡ್ಯೂಲ್ ಸ್ವತ್ತುಗಳು ಅವಿಭಕ್ತ ಕುಟುಂಬದ ಸ್ವತ್ತುಗಳಾಗಿದ್ದು, ವಾದಿಯರು ದಾವಾ ಷಡ್ಯೂಲ್ ಸ್ವತ್ತಿನ ಹಿಸ್ಸಾದಾರರಾಗಿರುತ್ತಾರೆ. ಪ್ರತಿವಾದಿಯರಿಗೆ ದಾವಾ ಷಡ್ಯೂಲ್ ಸ್ವತ್ತಿನ ಮೇಲೆ ಏನೊಂದು ಪ್ರತ್ಯೇಕ ಹಕ್ಕಾಗಲೀ, ಸ್ವಾಧೀನವಾಗಲೀ, ಅನುಭವವಾಗಲೀ,ಇರುವುದಿಲ್ಲ.

**3.** ಮುಂದುವರೆದು, ವಾದಿ ಮತ್ತು ಪ್ರತಿವಾದಿಯರ ತಂದೆ ಮುದ್ದಲಿಂಗೇಗೌಡರು ಪೌತಿಯಾದ ನಂತರ ಮುದ್ದಲಿಂಗೇಗೌಡರ ಹೆಂಡತಿ ಪುಟ್ಟಮ್ಮ ಮತ್ತು ಮುದ್ದಲಿಂಗೇಗೌಡರ ಇತರ ಇಬ್ಬರು ಸಹೋದರರ ನಡುವೆ ಕುಟುಂಬದಲ್ಲಿ ಆದ ಹಿಸ್ಸಾ ನಡವಳಿಕೆಯಂತೆ ಪ್ರತ್ಯೇಕವಾಗಿ ಕುಟುಂಬದ ಸ್ವತ್ತುಗಳನ್ನು ಅನುಭವಿಸಿಕೊಂಡು ಬಂದ ಕಾರಣ ಪುಟ್ಟಮ್ಮ ಮತ್ತು ಆಕೆಯ ಮೈದುನರ ನಡುವೆ ಹಿಸ್ಸಾ ಅನುಭವದ ಆಧಾರದ ಮೇರೆಗೆ ಎಂ. ಆರ್. 42/95 96 ರಲ್ಲಿ ಖಾತೆಯಾಗಿದ್ದು, ದಾವಾ ಷಡ್ಯೂಲ್ ಸ್ವತ್ತುಗಳು ಸದರಿ ಖಾತೆ ಬದಲಾವಣೆ ಆಧಾರದ ಮೇರೆಗೆ ಪುಟ್ಟಮ್ಮನ ಕುಟುಂಬ ಹಿಸ್ಸೆಗೆ ಬಂದಂತಹ ಸ್ವತ್ತುಗಳಾಗಿರುತ್ತದೆ. ಹಾಲಿ ಎಲ್ಲಾ ದಾವಾ ಷಡ್ಯೂಲ್ ಸ್ವತ್ತುಗಳು ಪುಟ್ಟಮ್ಮನ ಹೆಸರಿನಲ್ಲಿಯೇ ಖಾತೆ ಇದ್ದು, ವಾದಿ ಮತ್ತು ಪ್ರತಿವಾದಿಯರು ಹಿಸ್ಸಾದಾರರಾಗಿ ಸ್ವಾಧೀನಾನುಭವದಲ್ಲಿರುತ್ತಾರೆ.

**4.** ಮುಂದುವರೆದು, ವಿದ್ಯಮಾನಗಳು ಹೀಗಿರುವಲ್ಲಿ ಪ್ರತಿವಾದಿಯರು ದಾವಾ ಷಡ್ಯೂಲ್ ಸ್ವತ್ತುಗಳ ಖಾತೆಯನ್ನು ತಮ್ಮ ಹೆಸರಿಗೆ ಮಾಡಿಸಿಕೊಂಡು ಕುಟುಂಬಕ್ಕೆ ಯಾವುದೇ ದರದ್ದು ಇಲ್ಲದಿದ್ದರೂ ವಾದಿಯರ ಹಕ್ಕಿಗೆ ಚ್ಯುತಿಯುಂಟು ಮಾಡುವ ದುರುದ್ದೇಶದಿಂದ ಬೇರೆಯವರಿಗೆ ಪರಬಾರೆ ಮಾಡಲು ಹವಣಿಸುತ್ತಿದ್ದಾರೆಂದು ವಾದಿಯರಿಗೆ ನಂಬಲರ್ಹ ಮೂಲಗಳಿಂದ ತಿಳಿದುಬಂದಿರುತ್ತೆ. ಈ ಕಾರಣದಿಂದ ವಾದಿಯರು, ಪ್ರತಿವಾದಿಯರನ್ನು ಬೇಟಿಮಾಡಿ ದಾವಾ ಷಡ್ಯೂಲ್ ಸ್ವತ್ತಿನಲ್ಲಿರುವ ತಮಗಿರುವ ಹಿಸ್ಸೆಯನ್ನು ಪ್ರತ್ಯೇಕಿಸಿ ಸ್ವಾಧೀನವಹಿಸಿಕೊಡುವಂತೆ ಈಗ್ಗೆ ಸುಮಾರು 6 ತಿಂಗಳ ಹಿಂದೆ ಕೇಳಿಕೊಂಡಾಗ ಪ್ರತಿವಾದಿಯರು ಇಲ್ಲದ ಸಬೂಬು ಹೇಳಿ ಹಿಸ್ಸಾ ನಡವಳಿಕೆಗಳನ್ನು ನಡೆಸಿ ಕೊಡಲು ಉದಾಸೀನರಾಗಿರುತ್ತಾರೆ. ಆದ್ದರಿಂದ ಅನ್ಯಮಾರ್ಗವಿಲ್ಲದೆ ದಾವಾ ಷಡ್ಯೂಲ್ ಸ್ವತ್ತುಗಳಲ್ಲಿ ತಮಗಿರುವ ತಲಾ 1/5 ಭಾಗ ಹಿಸ್ಸೆಯನ್ನು ಪ್ರತ್ಯೇಕಿಸಿ ಸ್ವಾಧೀನವಹಿಸಿಕೊಡುವಂತೆ ಕೋರಿ ಪ್ರತಿವಾದಿಯರ ವಿರುದ್ಧ ವಾದಿಯರು ಈ ದಾವಾ ತಂದಿರುತ್ತಾರೆ.

**5.** ಪ್ರತಿವಾದಿಯರಿಗೆ ಸಮನ್ಸ್ ಜಾರಿಯಾದ ನಂತರ, ಪ್ರತಿವಾದಿಯರು ಅವರ ಪರ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗದೇ ಇದ್ದ ಕಾರಣ

ಏಕಪಕ್ಷಿಯವಾಗಿ ಉಳಿದಿರುತ್ತಾರೆ.

**6.** ವಾದಪತ್ರದ ಸಂಗತಿಗಳನ್ನು ಗಮನಿಸಿದಾಗ, ಈ ನ್ಯಾಯಾಲಯಕ್ಕೆ ಈ ಕೆಳಕಂಡ ಅಂಶಗಳು ಉದ್ಭವಿಸಿರುತ್ತದೆ.

**: ಅಂಶಗಳು :**

**ಅಂಶ:1 ವಾದಿಯರು ಮತ್ತು ಪ್ರತಿವಾದಿಯರು ಒಟ್ಟು ಕುಟುಂಬದ ಸದಸ್ಯರು ಹಾಗೂ ದಾವಾ ಸ್ವತ್ತುಗಳು ಪಿತ್ರಾರ್ಜಿತ ಸ್ವತ್ತುಗಳು ಎಂದು ರುಜುವಾತು ಪಡಿಸುವರೇ ?**

**ಅಂಶ:2 ವಾದಿಯರು ದಾವಾ ಸ್ವತ್ತುಗಳಲ್ಲಿ 1/5 ನೇ ಭಾಗಂಶವನ್ನು ಪಡೆಯಲು ಅರ್ಹರು ಎಂದು ರುಜುವಾತು ಪಡಿಸುವರೇ ?**

**ಅಂಶ:3 ವಾದಿಯರು ದಾವೆಯಲ್ಲಿ ಕೋರಿರುವ ಪರಿಹಾರಗಳನ್ನು ಪಡೆಯಲು ಅರ್ಹರೇ ?**

**ಅಂಶ :4 ಏನು ಆದೇಶ ?**

**7.** 2 ನೇ ವಾದಿಯು ವಾದಪತ್ರದ ಸಂಗತಿಗಳನ್ನು ನಿರೂಪಿಸಲು, ತನ್ನನ್ನು ತಾನು ಪಿ.ಡಬ್ಲ್ಯೂ.1 ಎಂದು ವಿಚಾರಣೆಗೆ ಒಳಪಡಿಸಿಕೊಂಡು, ತನ್ನ ಪರವಾಗಿ ಒಟ್ಟು 15 ದಾಖಲೆಗಳನ್ನು ನಿಪಿ.1 ರಿಂದ 15 ರವರೆಗೆ ಗುರುತಿಸಿಕೊಂಡು ತನ್ನ ಪರ ಸಾಕ್ಷಿದಾರರ ಹೇಳಿಕೆಯನ್ನು ಮುಕ್ತಾಯಗೊಳಿಸಿರುತ್ತಾರೆ.

**8.** ವಾದಿಯ ಪರ ವಕೀಲರ ವಾದಗಳನ್ನು ಆಲಿಸಿ, ದಾಖಲೆಗಳನ್ನು ಪರಿಶೀಲಿಸಲಾಯಿತು.

**9.** ಈ ಮೇಲಿನ ಅಂಶಗಳಿಗೆ ಈ ಕೆಳಗಿನಂತೆ ಉತ್ತರಿಸಲಾಗಿರುತ್ತದೆ.

ಅಂಶ ಸಂಖ್ಯೆ 1 ರಿಂದ 3 : **ಸಕಾರಾತ್ಮಕವಾಗಿ**

ಅಂಶ ಸಂಖ್ಯೆ 4 : ಅಂತಿಮ ಆದೇಶದಂತೆ

ಈ ಕೆಳಕಂಡ ಕಾರಣಗಳಿಗಾಗಿ,

**: : ಕಾರಣಗಳು : :**

**10.** **ಅಂಶ ಸಂಖ್ಯೆ – 1 ರಿಂದ 3 :** ಸದರಿ ಅಂಶಗಳು ಒಂದಕ್ಕೊಂದು ಪರಸ್ಪರ ಪೂರಕವಾಗಿರುವುದರಿಂದ ಚರ್ಚೆಯ ವೇಳೆ ಅಂಶಗಳ ಪುನರಾವರ್ತನೆಯನ್ನು ತಪ್ಪಿಸುವ ಸಲುವಾಗಿ ಎಲ್ಲಾ ಅಂಶಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

**11.** 1 ರಿಂದ 3 ನೇ ವಾದಿಯರು ಮತ್ತು 1 ಮತ್ತು 2 ನೇ ಪ್ರತಿವಾದಿಯರು ಸಹೋದರ ಸಹೋದರಿಯರಾಗಿರುತ್ತಾರೆ. ವಾದಿ ಮತ್ತು ಪ್ರತಿವಾದಿಯರು ಮುದ್ದಲಿಂಗೇಗೌಡ ಮತ್ತು ಪುಟ್ಟಮ್ಮನವರ ಮಕ್ಕಳಾಗಿರುತ್ತಾರೆ. ದಾವಾ ಷಡ್ಯೂಲ್ ಸ್ವತ್ತುಗಳು ವಾದಿ ಮತ್ತು ಪ್ರತಿವಾದಿಯರ ತಂದೆ ಮುದ್ದಲಿಂಗೇಗೌಡರ ಪಿತ್ರಾರ್ಜಿತ ಸ್ವತ್ತುಗಳಾಗಿದ್ದು, ಹಿಂದೂ ಅವಿಭಕ್ತ ಕುಟುಂಬದ ವಾದಿ ಮತ್ತು ಪ್ರತಿವಾದಿಯರ ಪಿತ್ರಾರ್ಜಿತ ಸ್ವತ್ತುಗಳಾಗಿರುತ್ತದೆ. ಈವರೆವಿಗೂ ವಾದಿ ಮತ್ತು ಪ್ರತಿವಾದಿಯರ ನಡುವೆ ಒಟ್ಟು ಕುಟುಂಬದಲ್ಲಿ ಯಾವುದೇ ಹಿಸ್ಸಾ ನಡವಳಿಕೆಗಳು ನಡೆದಿರುವುದಿಲ್ಲ. ದಾವಾ ಷಡ್ಯೂಲ್ ಸ್ವತ್ತುಗಳು ಅವಿಭಕ್ತ ಕುಟುಂಬದ ಸ್ವತ್ತುಗಳಾಗಿದ್ದು, ವಾದಿಯರು ದಾವಾ ಷಡ್ಯೂಲ್ ಸ್ವತ್ತಿನ ಹಿಸ್ಸಾದಾರರಾಗಿರುತ್ತಾರೆ. ಪ್ರತಿವಾದಿಯರಿಗೆ ದಾವಾ ಷಡ್ಯೂಲ್ ಸ್ವತ್ತಿನ ಮೇಲೆ ಏನೊಂದು ಪ್ರತ್ಯೇಕ ಹಕ್ಕಾಗಲೀ, ಸ್ವಾಧೀನವಾಗಲೀ, ಅನುಭವವಾಗಲೀ,ಇರುವುದಿಲ್ಲ.

**12.** ಮುಂದುವರೆದು ವಾದಿ ಮತ್ತು ಪ್ರತಿವಾದಿಯರ ತಂದೆ ಮುದ್ದಲಿಂಗೇಗೌಡರು ಪೌತಿಯಾದ ನಂತರ ಮುದ್ದಲಿಂಗೇಗೌಡರ ಹೆಂಡತಿ ಪುಟ್ಟಮ್ಮ ಮತ್ತು ಮುದ್ದಲಿಂಗೇಗೌಡರ ಇತರ ಇಬ್ಬರು ಸಹೋದರರ ನಡುವೆ ಕುಟುಂಬದಲ್ಲಿ ಆದ ಹಿಸ್ಸಾ ನಡವಳಿಕೆಯಂತೆ ಪ್ರತ್ಯೇಕವಾಗಿ ಕುಟುಂಬದ ಸ್ವತ್ತುಗಳನ್ನು ಅನುಭವಿಸಿಕೊಂಡು ಬಂದ ಕಾರಣ ಪುಟ್ಟಮ್ಮ ಮತ್ತು ಆಕೆಯ ಮೈದುನರ ನಡುವೆ ಹಿಸ್ಸಾ ಅನುಭವದ ಆಧಾರದ ಮೇರೆಗೆ ಎಂ. ಆರ್. 42/95 96 ರಲ್ಲಿ ಖಾತೆಯಾಗಿದ್ದು, ದಾವಾ ಷಡ್ಯೂಲ್ ಸ್ವತ್ತುಗಳು ಸದರಿ ಖಾತೆ ಬದಲಾವಣೆ ಆಧಾರದ ಮೇರೆಗೆ ಪುಟ್ಟಮ್ಮನ ಕುಟುಂಬ ಹಿಸ್ಸೆಗೆ ಬಂದಂತಹ ಸ್ವತ್ತುಗಳಾಗಿರುತ್ತದೆ. ಹಾಲಿ ಎಲ್ಲಾ ದಾವಾ ಷಡ್ಯೂಲ್ ಸ್ವತ್ತುಗಳು ಪುಟ್ಟಮ್ಮನ ಹೆಸರಿನಲ್ಲಿಯೇ ಖಾತೆ ಇದ್ದು, ವಾದಿ ಮತ್ತು

ಪ್ರತಿವಾದಿಯರು ಹಿಸ್ಸಾದಾರರಾಗಿ ಸ್ವಾಧೀನಾನುಭವದಲ್ಲಿರುತ್ತಾರೆ. ಆದ್ದರಿಂದ ಅನ್ಯಮಾರ್ಗವಿಲ್ಲದೆ ದಾವಾ ಷಡ್ಯೂಲ್ ಸ್ವತ್ತುಗಳಲ್ಲಿ ತಮಗಿರುವ ತಲಾ 1/5 ಭಾಗ ಹಿಸ್ಸೆಯನ್ನು ಪ್ರತ್ಯೇಕಿಸಿ ಸ್ವಾಧೀನವಹಿಸಿಕೊಡುವಂತೆ ಕೋರಿ ಪ್ರತಿವಾದಿಯರ ವಿರುದ್ಧ ವಾದಿಯರು ಈ ದಾವಾ ತಂದಿರುತ್ತಾರೆ.

**13.** ಪ್ರತಿವಾದಿಯರಿಗೆ ಸಮನ್ಸ್ ಜಾರಿಯಾದ ನಂತರ, ಪ್ರತಿವಾದಿಯರು ಅವರ ಪರ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗದೇ ಇದ್ದ ಕಾರಣ ಏಕಪಕ್ಷಿಯವಾಗಿ ಉಳಿದಿರುತ್ತಾರೆ.

**14.** 2 ನೇ ವಾದಿಯು ತನ್ನ ವಾದಪತ್ರದ ಅಂಶಗಳನ್ನು ರುಜುವಾತುಪಡಿಸುವ ಸಲುವಾಗಿ ತನ್ನನ್ನು ಪಿಡಬ್ಲ್ಯೂ.1 ಎಂದು ವಿಚಾರಣೆಗೆ ಒಳಪಡಿಸಿದ್ದು, ತನ್ನ ಮುಖ್ಯ ವಿಚಾರಣೆಯ ಬದಲಾಗಿ ಪ್ರಮಾಣಪತ್ರವನ್ನು ಸಲ್ಲಿಸಿದ್ದು, ವಾದಪತ್ರದ ಅಂಶಗಳನ್ನೇ ಪುನರ್ ಉಚ್ಚರಿಸಿರುತ್ತಾರೆ. ತನ್ನ ಪರವಾಗಿ ಒಟ್ಟು 15 ದಾಖಲೆಗಳನ್ನು ಹಾಜರುಪಡಿಸಿದ್ದು, ಅವುಗಳೆಂದರೇ, ನಿಪಿ.1 ರಿಂದ 14 ಪಹಣಿ ಪತ್ರಿಕೆಗಳು ಮತ್ತು ನಿಪಿ.15 ಎಂ.ಆರ್ ಪ್ರತಿ.

**15.** ವಾದಿಯು ತನ್ನ ವಾದಪತ್ರದಲ್ಲಿ ದಾವಾಸ್ವತ್ತುಗಳು ತನ್ನ ಹಾಗೂ ಪ್ರತಿವಾದಿಯರ ಪಿತ್ರಾರ್ಜಿತ ಸ್ವತ್ತು ಎಂದು ನುಡಿದಿದ್ದು, ಅದಕ್ಕೆ ಪೂರಕವಾಗಿ ನಿಪಿ.1 ರಿಂದ 15 ರ ದಾಖಲೆಗಳನ್ನು ಹಾಜರುಪಡಿಸಿದ್ದು, ಅದರಲ್ಲಿ ಸದರಿ ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ ದಾವಾಸ್ವತ್ತುಗಳು ಪುಟ್ಟಮ್ಮ ಕೋಂ ಮುದ್ದಲಿಂಗೇಗೌಡರವರ ಹೆಸರಿನಲ್ಲಿದ್ದು, ಮುದ್ದಲಿಂಗೇಗೌಡರವರ ಮರಣ ನಂತರ ಸದರಿ ಸ್ವತ್ತುಗಳು ಪುಟ್ಟಮ್ಮ ರವರ ಹೆಸರಿಗೆ ಪೌತಿಖಾತೆಯ ಆಧಾರದ ಮೇಲೆ ಖಾತಾ ಬದಲಾವಣೆಯಾಗಿರುವುದು ಕಂಡುಬರುತ್ತದೆ. ಈ ದಾವೆಯಲ್ಲಿ ಪ್ರತಿವಾದಿಯರಿಗೆ ಸಮನ್ಸ್ ಜಾರಿಯಾದರೂ ಅವರು ನ್ಯಾಯಾಲಯಕ್ಕೆ ಹಾಜರಾಗಿರುವುದಿಲ್ಲ ಹಾಗೂ ತಮ್ಮ ಪರವಾಗಿ ಪ್ರತಿವಾದ ಪತ್ರವನ್ನು ಸಲ್ಲಿಸಿರುವುದಿಲ್ಲ, ಸದರಿಯವರು ಏಕಪಕ್ಷಿಯಾವಗಿರುತ್ತಾರೆ.

**16.** ನಿಪಿ.1 ರಿಂದ 14 ರ ಪಹಣಿ ಪತ್ರಿಕೆಗಳು ಹಾಗೂ ನಿಪಿ.15 ಮ್ಯುಟೇಶನ್ ರಿಜಿಸ್ಟರ್ ನ್ನು ಗಮನಿಸಿದಾಗ ದಾವಾ ಐಟಂ.1 ರಿಂದ 14 ರ ಸ್ವತ್ತುಗಳು ವಾದಿಯರು ಹಾಗೂ ಪ್ರತಿವಾದಿಯರ ಪಿತ್ರಾರ್ಜಿತ ಸ್ವತ್ತುಗಳು ಹಾಗೂ ವಾದಿ ಮತ್ತು ಪ್ರತಿವಾದಿಯರು ಅವಿಭಕ್ತ ಕುಟುಂಬದ ಸದಸ್ಯರು ಎಂದು ಕಂಡುಬರುತ್ತದೆ. ಹೀಗಾಗಿ ವಾದಿಯರು ತಾವು ಒಟ್ಟು ಕುಟುಂಬದ ಸದಸ್ಯರು ಹಾಗೂ ದಾವಾ ಸ್ವತ್ತುಗಳು ವಾದಿಯರ ಹಾಗೂ ಪ್ರತಿವಾದಿಯರ ಪಿತ್ರಾರ್ಜಿತ ಸ್ವತ್ತುಗಳು ಎಂದು ಮೌಖಿಕ ಮುತ್ತ ದಸ್ತವೇಜು ಸಾಕ್ಷ್ಯಗಳಿಂದ ರುಜುವಾತು ಪಡಿಸಿದ್ದು, ವಾದಿಯರು ದಾವಾಸ್ವತ್ತಿನಲ್ಲಿ ತಲಾ 1/5 ರ ಭಾಗಾಂಶದ ಹಕ್ಕನ್ನು ಹೊಂದಿರುತ್ತಾರೆ ಎಂದು ಅಭಿಪ್ರಾಯಪಡುತ್ತಾ ಅಂಶ **ಸಂಖ್ಯೆ 1 ರಿಂದ 3 ನ್ನು ಸಕಾರಾತ್ಮಕವಾಗಿ** ಉತ್ತರಿಸಲಾಗಿರುತ್ತದೆ.

**17.** **ಅಂಶ ಸಂಖ್ಯೆ ಃ 4 ಃ** ಅಂಶ 1 ರಿಂದ 3 ರಲ್ಲಿ ಚರ್ಚಿಸಿರುವ ಕಾರಣಗಳಿಗಾಗಿ, ಈ ಕೆಳಕಂಡಂತೆ ಆದೇಶ ಮಾಡಲಾಗಿರುತ್ತದೆ.

**ಃ ಆದೇಶ ಃ**

**ವಾದಿಯರು ಸಲ್ಲಿಸಿರುವ ದಾವೆಯನ್ನು ಖರ್ಚು ಸಹಿತ ಭಾಗಶಃ ಪುರಸ್ಕರಿಸಲಾಗಿದೆ.**

**ವಾದಿಯರು ದಾವಾ ಸ್ವತ್ತುಗಳಲ್ಲಿ 1/5 ನೇ ಭಾಗದ ಹಿಸ್ಸೆಯನ್ನು ಪಡೆದುಕೊಳ್ಳಲು ಅರ್ಹರಾಗಿರುತ್ತಾರೆಂದು ತಿರ್ಮಾನಿಸಲಾಗಿದೆ.**

**1 ಮತ್ತು 2 ನೇ ಪ್ರತಿವಾದಿಯರು ತಲಾ 1/5 ಭಾಗದ ಹಿಸ್ಸೆಯನ್ನು ಪಡೆದುಕೊಳ್ಳಲು ಅರ್ಹರಾಗಿರುತ್ತಾರೆಂದು ತಿರ್ಮಾನಿಸಲಾಗಿದೆ.**

**ತಮ್ಮ ಸ್ವತ್ತಿಗೆ ಸಂಬಂಧಿಸಿದಂತೆ ನ್ಯಾಯಾಲಯದ ಶುಲ್ಕವನ್ನು ಪಾವತಿಸಲು 1 ಮತ್ತು 2 ನೇ ಪ್ರತಿವಾದಿಯರಿಗೆ ಸೂಚಿಸಲಾಗಿದೆ.**

**ತೀರ್ಪಿನಂತೆ ಡಿಕ್ರಿ ಬರೆಯಿರಿ.**

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ಹೇಳಿ, ಅವರಿಂದ ಕಂಪ್ಯೂಟರ್ ನಲ್ಲಿ ಟೈಪ್ ಮಾಡಿಸಿ, ನನ್ನಿಂದ ತಿದ್ದುಪಡಿ ಮಾಡಿ ಇಂದು ದಿನಾಂಕಃ **17 ನೇ ಮಾರ್ಚ್ 2026** ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

**(ಶ್ರೀಮತಿ ಕುಸುಮ ವಿ.)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂ., ಚನ್ನರಾಯಪಟ್ಟಣ.**

**: : ಪರಿಚ್ಛೇದ : :**

**1. ವಾದಿಯ ಪರ ವಿಚಾರಣೆ ಮಾಡಿದ ಸಾಕ್ಷಿಗಳ ಪಟ್ಟಿ .**

ಪ್ರಾಸಾ.1 ಃ ಯಶೋದಮ್ಮ

**2. ವಾದಿಯ ಪರ ಗುರುತಿಸಲಾದ ದಸ್ತಾವೇಜುಗಳ ಪಟ್ಟಿ**

ನಿಪಿ.1 ರಿಂದ 14 ಃ ಪಹಣಿ ಪತ್ರಿಕೆಗಳು

ನಿಪಿ.15 ಃ ಎಂ.ಆರ್ ಪ್ರತಿ

**3. ಪ್ರತಿವಾದಿಗಳ ಪರ ವಿಚಾರಣೆ ಮಾಡಿದ ಸಾಕ್ಷಿಗಳ ಪಟ್ಟಿ** ಃ ಇಲ್ಲ

**4. ಪ್ರತಿವಾದಿಗಳ ಪರ ಗುರುತಿಸಲಾದ ದಸ್ತಾವೇಜುಗಳ ಪಟ್ಟಿ** ಃ ಇಲ್ಲ

**(ಶ್ರೀಮತಿ ಕುಸುಮ ವಿ)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂ., ಚನ್ನರಾಯಪಟ್ಟಣ.**

(ಈ ತೀರ್ಪನ್ನು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು)

(ತೀರ್ಪಿನ ಪ್ರತಿಯನ್ನು ಪ್ರತ್ಯೇಕವಾಗಿ ಲಗತ್ತಿಸಲಾಗಿದೆ.)

**ಃ ಆದೇಶ ಃ**

**ವಾದಿಯರು ಸಲ್ಲಿಸಿರುವ ದಾವೆಯನ್ನು ಖರ್ಚು ಸಹಿತ ಭಾಗಶಃ ಪುರಸ್ಕರಿಸಲಾಗಿದೆ.**

**ವಾದಿಯರು ದಾವಾ ಸ್ವತ್ತುಗಳಲ್ಲಿ 1/5 ನೇ ಭಾಗದ ಹಿಸ್ಸೆಯನ್ನು ಪಡೆದುಕೊಳ್ಳಲು ಅರ್ಹರಾಗಿರುತ್ತಾರೆಂದು ತಿರ್ಮಾನಿಸಲಾಗಿದೆ.**

**1 ಮತ್ತು 2 ನೇ ಪ್ರತಿವಾದಿಯರು ತಲಾ 1/5 ಭಾಗದ ಹಿಸ್ಸೆಯನ್ನು ಪಡೆದುಕೊಳ್ಳಲು ಅರ್ಹರಾಗಿರುತ್ತಾರೆಂದು ತಿರ್ಮಾನಿಸಲಾಗಿದೆ.**

**ತಮ್ಮ ಸ್ವತ್ತಿಗೆ ಸಂಬಂಧಿಸಿದಂತೆ ನ್ಯಾಯಾಲಯದ ಶುಲ್ಕವನ್ನು ಪಾವತಿಸಲು 1 ಮತ್ತು 2 ನೇ ಪ್ರತಿವಾದಿಯರಿಗೆ ಸೂಚಿಸಲಾಗಿದೆ.**

**ತೀರ್ಪಿನಂತೆ ಡಿಕ್ರಿ ಬರೆಯಿರಿ.**

(ಶ್ರೀಮತಿ ಕುಸುಮ ವಿ)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ಚನ್ನರಾಯಪಟ್ಟಣ.